ಆನಂದ ಕುಟೀರ, ಪುತ್ತೂರು. 30.05.2002

ಸಾಯಿಬಾಬ ಭಜನಾ ಮಂಡಲಿಯವರು ಭಜನೆ ಮಾಡಿದ ಸಂದರ್ಭದಲ್ಲಿ.

ಇಲ್ಲಿ ಮಾತನಾಡುವವನೇ ಇಲ್ಲ. ಮೈಕಿನಲ್ಲಿ ಮಾತುಗಳು ಕೇಳಿದಂತೆ ಇಲ್ಲಿಂದ ಮಾತುಗಳು ಕೇಳಬಹುದು ಬಂಧುಗಳೇ, ಬಳಗದವರೇ. ನೀವೆಲ್ಲರೂ ಜೊತೆಯಾಗಿ ಬಂದು ಒಗ್ಗಟ್ಟಾಗಿ ಬಂದು ಈ ಕಾರ್ಯವನ್ನು ನೆರವೇರಿಸಿ ಕೊಟ್ಟದ್ದು ಬಹಳ ಆನಂದಕರವಾದ ಸಂಗತಿ. ನಿಮಗೆಲ್ಲರಿಗೂ ಪರಮಾತ್ಮನ ಅನುಗ್ರಹ ದೊರಕಲಿ ಅಂತ್ಹೇಳಿ ನಮ್ಮ ಪ್ರಾರ್ಥನೆ.

ನಾವು ಒಂದು ಪದ್ಯವನ್ನು ಹಾಡ್ಬೋದಾಪ್ಪ. ನೀವಿಷ್ಟು ಜನ ಹಾಡುವಾಗ ನಾವು ಸುಮ್ಮನೆ ಕೂತು ಕೇಳಿದ್ದಾಯ್ತಲ್ಲ. ಏನಪ್ಪ, ಇದು ನಾನು . . . ಮೈಕು ಬೇಡ ತೆಗೀರಿ (ಎದ್ದು ನಿಂತು)

ನಾನು . . . ಅಲ್ಲ . . . ನೀನು
ನಾನು ನೀನು ನನ್ನದೆಂಬ ಏನಪ್ಪ ಇದು
ನಾನು ನೀನು ನನ್ನದೆಂಬ ಭೇದಭಾವನೆಯನು ಬಿಟ್ಟು
ನಾನು ನೀನು ನನ್ನದೆಂಬ ಭೇದಭಾವನೆಯನು ಬಿಟ್ಟು
ಪಾರಮಾರ್ಥ ವಿಷಯವಾದ ರಾಮ ಸ್ಮರಣೆ ಮಾಡಿರಿ
ನಾನು ನೀನು ನನ್ನದೆಂಬ ಭೇದಭಾವನೆಯನು ಬಿಟ್ಟು
ಸದಾ ಪರಿಪೂರ್ಣನಾಗಿಹ ಪರಬ್ರಹ್ಮನ ನಿಜವ
ನಿನ್ನೊಳು ನೀ ನೋಡು ಆತ್ಮಾನಂದದಿ ಲೋಲಾಡು

ಇದು ಏಕವಚನ ಬಹುವಚನ ಬೇಕಾದ್ರೆ ನೀವು ಮಾಡಿಕೊಳ್ಬೋದು. ಅ್ಞಂ. ಏನಪ್ಪಾ ಈ ಪ್ರಪಂಚವನ್ನು ನೋಡುವಾಗ ನಮಗೆ ಆಶ್ಚರ್ಯವಾಗಿ ಕಾಣ್ತದೆ. ಯಾಕೇಂದ್ರೆ ನಾವು ಈ ಪ್ರಪಂಚಕ್ಕೆ ಬಂದವರು ಅ್ಞಂ. ನೀವೆಲ್ಲ ಮೊದಲೇ ಬಂದವರು. ನಿಮಗೆ ಈ ಪ್ರಪಂಚದ ಅನುಭವ ಎಲ್ಲಾ ಉಂಟು. ಆದ್ರೆ ನಮಗೆ ಇದು ಹೊಸತು. ಅದು ನಿಮ್ಮೆಲ್ಲರ ಒಂದು ಪರಿಚಯದಿಂದಾಗಿ. ಏನು ಪ್ರಪಂಚ. ಈ ಪ್ರಪಂಚದಲ್ಲಿ ಎರಡು ವಿಧದ ಜನಗಳನ್ನು ನೋಡ್ತಾ ಉಂಟು. ಹೇಳ್ಬಹುದಾ. ಒಂದು ದೇಹವೇ ನಾನು ಎಂಬ ವಿಚಾರಕ್ಕೆ ಒಳಪಟ್ಟ ಜನಾಂಗ. ದೇಹವೇ ನಾನು, ದೇಹಕ್ಕೆ ಸಂಬಂಧಪಟ್ಟ ವಿಚಾರಗಳೆಲ್ಲಾ ನನ್ನದು ಅ್ಞಂ. ದೇಹವೇ ನಾನು. ದೇಹಕ್ಕೆ ಸಂಬಂಧಪಟ್ಟ ವಿಷಯಾದಿಗಳೆಲ್ಲವೂ ನನ್ನದು. ಇದು ಒಂದು ವಿಧದ ಜನಾಂಗ. ಇನ್ನೊಂದು ಜನಾಂಗ ಹೇಗುಂಟು ಅಂತ ಕೇಳಿದ್ರೆ, ಎಲ್ಲವು ನೀನೆ, ಎಲ್ಲವು ನೀನೆ, ಎಲ್ಲವು ನೀನೆ. ದೇಹವು ಕೂಡ ನಾನಲ್ಲ. ದೇಹದಲ್ಲಿರುವವನು ನಾನು. ಇದು ಸಿದ್ಧಾಂತ. ಹೀಗೊಂದು ಪಾರ್ಟಿ ಉಂಟು. ಆ ಎರಡೂ ಪಾರ್ಟಿ ಜನರದ್ದು ಅನುಭವ ಆಯ್ತು ನಮಗೆ ಈ ಪ್ರಪಂಚದಲ್ಲಿ. ಮೊದಲು ನಮಗೆ ಈ ಪ್ರಪಂಚದ ಅನುಭವ ಅಂದ್ರೆ ಇಲ್ಲಿಗೆ ಬರೋದಕ್ಕೆ ಮುಂಚೆ ಇರ್ಲಿಲ್ಲ. ಬೇರೆ ಜನರ ಅನುಭವ ಇತ್ತು. ಅಂದ್ರೆ ಈ ನಮೂನೆ ಜನರದ್ದಲ್ಲ. ಅದು ಬೇರೆ ಜನರದ್ದು. ಅಲ್ಲಿ ನಾನು ಇಲ್ಲ, ನೀನು ಇಲ್ಲ, ನನ್ನದು ಇಲ್ಲ, ಯಾವುದೂ ಇಲ್ಲ. ಇಲ್ಲಿ ಬಂದು, ಇಲ್ಲಿಯ ಅನುಭವ ಆಯ್ತು.

ಈ ಒಂದು ಸ್ಥಳಕ್ಕೆ ನೀವೆಲ್ಲ ಬಂದದ್ದು ಆ ಪರಮಾತ್ಮನ ಅನುಗ್ರಹ ಸಿಗ್ಲಿ ಅಂತ್ಹೇಳಿ ಇಲ್ಲಿ ಬಂದದ್ದು ಅಂತ ಅಭಿಪ್ರಾಯ ಕಾಣ್ತದೆ. ಇಲ್ಲವಾದ್ರೆ ಸಾಧ್ಯವೇ ಇಲ್ಲ. ನಾವು ಕನಸಿನಲ್ಲಿ ಕೂಡ ನೆನೆಸ್ಲಿಲ್ಲ. ಇಂಥಾ ಒಂದು ಕಾರ್ಯಕ್ರಮ ಆಕ್ತದೆ ಅಂತ್ಹೇಳಿ. ಮೊನ್ನೆ ತಾನೆ ವರ್ತಮಾನ ಸಿಕ್ಕಿತು ನಮ್ಗೆ. ರಾಮನಾಯಕ್ರು ಬಂದಿದ್ರು ನಾವು ಭಜನೆ ಮಾಡಬಹುದಾ ಅಂತ. ಅದು ಪರಮಾತ್ಮನಿಂದ ಆ ಬುದ್ಧಿ ಬಂದದ್ದು. ಇವರೆಲ್ಲ ಇಲ್ಲಿ ಭಜನೆ ಮಾಡ್ಲಿಕ್ಕೆ ಅನುಮತಿ ಕೊಡು ಅಂತ್ಹೇಳಿ ನಮಗೆ ಒಳಗೆ ಹೇಳಿತು. ಒಳಗೊಬ್ಬ ಇದ್ದಾನೆ. ಅವ ಮನಸ್ಸು ಬುದ್ಧಿಗೆ ಪ್ರೇರಣೆ ಕೊಟ್ಟಾಗ ಈ ಬಾಯಿಯ ಮೂಲಕ ಮಾತುಗಳು ಬರ್ತಾ ಉಂಟಪ್ಪ. ಯಾರು ಮಾತ್ನಾಡುವವ ಇಲ್ಲಿ ಆ್ಹಂ. ಯಾರಪ್ಪ? ಆ್ಹಂ. ಒಳಗಿದ್ದವ. ಆ ಒಳಗಿದ್ದವನಿಗೆ ಮಹತ್ವ ಕೊಡಿ ಎಲ್ರು. ಅದು ಇಲ್ಲಿ ಮಾತ್ರವಲ್ಲ ಅಲ್ಲಿಯೂ ಇದ್ದಾನೆ. ಇಲ್ಲಿಯೂ ಇದ್ದಾನೆ. ಎಲ್ಲಾ ಕಡೆಯಲ್ಲೂ ಇದ್ದಾನೆ. ಎಲ್ಲಾ ಕಡೆಯಲ್ಲಿರುವವನೇ ಇಲ್ಲಿ ಇದ್ದಾನೆ. ಹಾಗಾದ್ರೆ ಇದಕ್ಕೆ (ದೇಹ ತೋರಿಸಿ) ಮಹತ್ವ ಉಂಟಾ? ನಾವೆಲ್ಲರೂ ಸರಿ ಸಮಾನ. ಹಾಗಾದ್ರೆ ಯಾರಪ್ಪ ಆಶೀರ್ವಾದ ಕೊಡುವವ. ಭಗವಾನ್. ಅವನಿಗೆ ಪ್ರಾರ್ಥನೆ ಎಲ್ರೂ ಇದ್ದು ಮಾಡಿಕೊಳ್ಳುವ ಅಲ್ಲಾ.

ನಾವು ವೀಕ್ಷಕರಾಗಿ ಬಂದವರು ಮೂರನೇ ವಲಯದಿಂದ ನಮ್ಮ ಮಾತುಗಳು ಬರುವಂಥಾದ್ದು.

ಜೈ ಶಂಕರ್ ಮಹಾದೇವ್. ಆ್ಹಂ. ಏನಪ್ಪ ಒಳಗಿಂದ ಮಾತು ಬರ್ತದೆ ಅವನೇ ಇದ್ದಾನೆ ಒಳಗೆ. ಅವನು ಜೈ ಶಂಕರ್ ಮಹಾದೇವ್ ಅಂತ ಹೇಳುವಾಗ ಅವನಿಗಿಂತ ಪ್ರತ್ಯೇಕವಾಗಿ ಒಬ್ಬ ಇದಾನಪ್ಪ. ಬಂಧುಗಳೇ ಏನು ಆಶ್ಚರ್ಯ, ಏನು ಪ್ರಪಂಚ, ಏನು ಪರಮಾತ್ಮ. ಅದರ ಮೇಲೆ 'ನಾನು' ಅಹಂ. ಇದು ಎಲ್ಲಾ ಬಿದ್ದು ಹೋಯ್ತು. ಕರ್ತೃತ್ವ ನಾಶವಾಯ್ತು. ಸಂಕಲ್ಪವಿಲ್ಲ, ಕರ್ಮವಿಲ್ಲ. ಕರ್ಮ ಉಂಟು. ಆದ್ರೆ ಅದು ಅಕರ್ಮ. ಇದೆಲ್ಲ ಉಪನ್ಯಾಸವಲ್ಲ. ನಮಸ್ಕಾರ.

*****